Regd. No. M 1299 SATYAVADI Fonnded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 219 | ಸೋಮವಾರ 17-5-46 | ಬಿಡಿ ಪ್ರತಿ 3 ಪೈ

ಪೌರಸಭೆ

ಮೊನ್ನೆಯ ದಿವಸ 4 ಘಂಟೆಯಲ್ಲಿ ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನ ಸೇರಿದ್ದಿತು. ಪ್ರಸ್ತುತಿಗ ಳಾದ ಶ್ರೀ ಜಿ. ರಾಮಚಂದ್ರರಾವ್ ಬಾರಿಫೋರಿಯವರು ಅಗ್ರಾಸನವಹಿಸಿದ್ದರು. 21 ಮಂದಿ ಸದಸ್ಯರುಗಳು ಮಾತ್ರ ಸಭೆಗೆ ಸೇರಿದ್ದರು. ಶ್ರೀ ಜನಾರ್ದನನಾಯ್ಡು ಮತ್ತು ಶ್ರೀ ಎಂ. ಜಿ. ಸಿ. ಬಸಪ್ಪ ಇವರುಗಳು ಸಭಾ ಕಾರ್ಯಕಲಾಪಗಳಾಗಿದ್ದರು.

ಸಭೆಯ ಪ್ರಾರಂಭದಲ್ಲಿಯೇ ಸಭೆಯ ಕಾರ್ಯಕಲಾಪ ಪಟ್ಟಿಯು ಮುದ್ರಣ ಸಮರ್ಪಕವಾಗಿಲ್ಲವೆಂದೂ, ಮುದ್ರಣ ಶಾಲೆಯಲ್ಲಿ ಅಚ್ಚು ಹಾಕಿಸಬೇಕೆಂಬ ಸೂಚನೆಯನ್ನು ಪರಿಶೀಲಿಸುವುದಾಗಿ ಅಧ್ಯಕ್ಷ ಭವನದ ದೊರೆಯಿತು ಸ್ಥಾನ ಘಟ್ಟವನ್ನು ಚಾಮುಂಡಿ ಬೆಟ್ಟದ ಕಿಬ್ಬಿಗೆ 40000 ರೂ. ಖರ್ಚಿನಲ್ಲಿ ವರ್ಗಾಯಿಸಲು ಪೂರ್ವಿತ್ಯಗಳ ಅಭಿಪ್ರಾಯವನ್ನು ಕೇಳಲಾಗಿ, ಹಲವು ಸದಸ್ಯರುಗಳು ವಿವಿಧ ಅಭಿಪ್ರಾಯವಿತ್ತರು. ಮುಂದಿನ ಮಾಹೆ ತಾ|| 15 ರಲ್ಲಿ ಆ ಸ್ಥಳಕ್ಕೆ ಭೇಟಿಯಿತ್ತು, ಪರಿಶೀಲಿಸುವುದು ಉತ್ತಮವೆಂದು ತೀರ್ಮಾನವಾಯಿತು.

ಪುರಭವನದ ಸಮಿತಿಯ ಕಾರ್ಯಕಲಾಪಗಳನ್ನು ಮುಂದುವರಿಸಬೇಕೆಂದು ತೀರ್ಮಾನವಾಯಿತು.

ಸುಬ್ಬರಾಯನ ಕೆರೆಯಲ್ಲಿ ಕಾವಲುಗಾರನ ಕಟ್ಟಡವನ್ನು ಕಟ್ಟಿಸುವುದರ ಮೇಲೆ ತೀವ್ರ ಚರ್ಚೆ ನಡೆಯಿತು; ಶ್ರೀ ರಂಗಯ್ಯನವರ ಅಂಬಳೆ ಅಣ್ಣಯ್ಯ ಪಾರ್ಕ್ (ಸುಬ್ಬರಾಯನ ಕೆರೆ) ನಲ್ಲಿ ಜಾಡಮಾಲಿಗಳು ನಿವಾಸ ಮಾಡಿಕೊಂಡಿದ್ದಾರೆ. ಸೌದೆ ಅಂಗಡಿ ಸ್ಥಾಪನೆಯಾಗಿದೆ ಎಂಬುದಾಗಿ ತಿಳಿಸಿದರು. ಇದೆಲ್ಲವನ್ನು ಸರಿಪಡಿಸುವುದಾಗಿ ಅಧ್ಯಕ್ಷರು ತಿಳಿಸಿದರು.

ಅಡಳಿತ ಸಮಿತಿ ಸಭೆಯ ಕಾರ್ಯಕಲಾಪಗಳನ್ನು ರಿಕಾರ್ಡ್ ಮಾಡಲಾಯಿತು.

ಪೌರಸಭಾ ಸೂಪರಿಂಟೆಂಡೆಂಟರಾಗಿದ್ದ ಶ್ರೀ ಸುಬ್ಬರಾಯ ಸ್ಥಾನದಲ್ಲಿ ಬಂದಿರುವ ಶ್ರೀ ದೇವರಾಜರಾಯರಿಗೆ ರೂ' 20 ಭತ್ಯವನ್ನು ಕೊಡಬೇಕೆಂದೂ, ಏಕೆಂದರೆ ಆ ನೌಕರಿಯು ಜವಾಬ್ದಾರಿಯು ತುಂಬಾ ಮುಖ್ಯ ಕಷ್ಟವೆಂದು ಅಧ್ಯಕ್ಷ ತಿಳಿಸಿದರು. ಸಾಂಗ್ರೆಸ್ ಪಕ್ಷ ಸದಸ್ಯರಿಗೆ ಕೊಡದೆಂದೂ, ನಾಲ್ಕೈದು ತಿಂಗಳನಂತರ ಅವರ ಕೆಲಸದ ನೈಪುಣ್ಯತೆ ಮೇಲೆ ಕೊಡಬೇಕೆಂದೂ ತಿಳಿಸಿದರು

ಶ್ರೀಮತಿ ದಿಯೋಬಾಲ ಶ್ರೀ

ಸಮರ ಸಚಿವ ಕೂಡ ಭಾರತೀಯ

ದೇವರು ಕೊಟ್ಟರೂ

ಪೂಜಾರಿ ಕೊಡ

ಇಂಡೋನೇಷ್ಯಾ ನಾಡಿನ ಡಾ || ಸೆರಿಯಾರರು ಭಾರತಕ್ಕೆ ಅಕ್ಕಿ ಕಳುಹಿಸಿಕೊಡಲು ಮಾತುಗಳಿಗೆ ತಂಬಿ ತಂತಿ ಕಳಿಸಿದ್ದಾರೆ. ಭಾರತದ ಸ್ಥಿತಿ ಕಂಡು ಮರುಗಿ ಈ ರೀತಿ ನೆರವು ನೀಡಲು ಮುಂದೆ ಬಂದರು. ಆದರೆ ಈ ಅಕ್ಕಿ ಭಾರತಕ್ಕೆ ಸಾಗಿಬರಬೇಕಾದರೆ ಡಚ್ ಸರ್ಕಾರಕ್ಕೆ ಸೇರಿರುವ ಬಂದರುಗಳಿಂದಲೇ ಆ ಹೊಸಲು ದಾಟೇ ಬರಬೇಕಾಗಿರುವ ಧ್ಯೇಯ ಡಚ್ ಸರ್ಕಾರದವರ ಬೇಕು ಬೇಡಗಳನ್ನು ಜೋರು ತೋರಿಸಿ ಹೊರಟ ದ್ದಾರೆ

ಎಫ್. ಸಿ ದೇವರಾಜೆ ಅರಸ್ ಮತ್ತು ಶ್ರೀ ಸಿದ್ಧಯ್ಯನವರು ರೂ. 20 ಭತ್ಯ ಕೊಡಬೇಕೆಂದು ತಿಳಿಸಿದರು

ಪೌರಸಭಾ ಅಧಿಕಾರಿ ವರ್ಗಕ್ಕೆ ಸ್ಥಾನಗಳನ್ನು ಕಲ್ಪಿಸಿರುವಂತೆ ಉಪಾಧ್ಯಕ್ಷರಿಗೇಕೆ ಸ್ಥಾನ ಕಲ್ಪಿಸಿಲ್ಲವೆಂದೂ ಎಂದು ಶ್ರೀ ಅಹ್ಮದ್ ಖಾನ್ರು ಪ್ರಶ್ನಿಸಿದರು.

ಶ್ರೀ ಎಫ್ ಸಿ ದೇವರಾಜೆರಸ್ ಅವರು ಅವನ್ನೇ ಪುನರ್ಪ್ರಸ್ತಾಪಿಸಿದರು

ಶ್ರೀ ಬಿ. ನಾರಾಯಣಸ್ವಾಮಿಯವರು ಸ್ಥಾನದ ವಿಷಯ ಬಂತೆಂದರೆ ತಮಗೂ ಸಹ ಮಾತಾಡಲವಕಾಶ ಕೊಡಬೇಕೆಂದರು.

ಅಧ್ಯಕ್ಷರು ಎಲ್ಲವನ್ನೂ ಪರ್ಯಾಲೋಚಿಸುವುದಾಗಿ ತಿಳಿಸಿದರು.

ಸಂಯುಕ್ತ ಅಮೇರಿಕಾದಲ್ಲಿ 18 ನಗರಗಳಿಗೆ 'ಬ್ರೂಕ್ಲಿನ್' ಎಂದು ಹೆಸರಿದೆ.

ಗ್ರೀಸು ದೇಶದಲ್ಲಿ ರಾಜನಿರಬೇಕೇ ಬೇಡವೇ ಎಂಬ ವಿಷಯದಲ್ಲಿ ಸಪ್ಟಂಬರು ತಿಂಗಳಲ್ಲಿ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳುವರು.

ನವದೆಹಲಿ, ಮೇ 25 — ಮಂತ್ರಿಮಂಡಲ ನಿಯೋಗದವರು ಲೀಗ್ ಮತ್ತು ಕಾಂಗ್ರೆಸ್ ಹೇಳಿಕೆಗಳನ್ನು ಪರಿಶೀಲಿಸಿದನಂತರ ತಾತ್ಕಾಲಿಕ ಸರ್ಕಾರದ ರಚನೆ ಬಗ್ಗೆ ಎಲ್ಲ ಇಲಾಖೆಯ ಮಂತ್ರಿಯು ಅಡಳಿತ ಕೂಡಾ ಭಾರತೀಯರದೇ ಇರುವುದೆಂದೂ ಭಾರತ ರಾಜಕೀಯ ಪಕ್ಷಗಳೊಡನೆ ಸಂಧ್ಯಾಲೋಚಿಸಿ ಮಂತ್ರಿಗಳನ್ನು ಆರಿಸುವುದೆಂದು ನಿರ್ಧರಿಸಿರುವರು.

ಜರ್ಮನಿಗೆ ಎರಡರಷ್ಟು

ಬ್ರಿಟಿಷರು ಹಿಡಿದಿರುವ ಜರ್ಮನಿಗೆ ಆಹಾರ ಸರಬರಾಜು ನಡೆದಿರಿಯಷ್ಟೆ ಅಲ್ಲಿಗೆ ಕಳುಹಿಸುತ್ತಿರುವುದರ ಎರಡರಷ್ಟು ಈಗ ಅಮೆರಿಕಾದಿಂದ ಭಾರತಕ್ಕೆ ಆಹಾರ ಪದಾರ್ಥ ಬರುತಿದೆ. ಹರ್ಬರ್ಟ್ ಹೂವರ್ ಸರ್ಕಾರ ಪ್ರವಾಸ ಪ್ರಭಾವದಿಂದ ಹೀಗಾಯಿತು.

ಜವಹರ ಸಿಂಹ ಜೈರಳಿದೆ!

ಫರೀದ್‌ಕೋಟೆ ಎಂಬ ಸಂಸ್ಥಾನದಲ್ಲಿ ಭೀಕರ ದಬ್ಬಾಳಿಕೆ ನಡೆಯುತ್ತಿದೆ. ಪ್ರತಿಬಂಧಕಗಳು ಪ್ರಬಲವಾಗಿವೆ. ಸಂಸ್ಥಾನಗಳ ಪ್ರಜಾತಾಂತ್ರಿಕ ಜವಹರಲಾಲ್ ನೆಹರೂವರು ಈತನಕ ಅತ್ತ ನಿಗ ಕೊಡಲು ವಿರಾಮವಿರಲಿಲ್ಲ. ಕೆಲವು ದಿನಗಳ ಕೆಳಗೆ ಆ ಸಂಸ್ಥಾನಾಧಿಪರನ್ನು 'ನಾನು ಅಲ್ಲಿ ಬಂದು ನಿಮ್ಮ ಮೇಲೆ ಕ್ರಮ ಮಾಡುತ್ತೇನೆಂದು' ಹೆದರಿಸಿದ್ದರು. 'ನೀವು ಬಂದರೂ ನಿಮಗೂ ನಮ್ಮಲ್ಲಿ ಧಿಕ್ಕಾರ' ಎಂದು ಆ ಸಂಸ್ಥಾನ ಸರ್ಕಾರವೂ ತೊಡೆ ತಟ್ಟಿತ್ತು. ಈಗ ಈ ಸಮರ ಆರಂಭವಾಗುವ ಸೂಚನೆಗಳು ಕಂಡು ಬರುತ್ತಿವೆ. ಜವಹರ್ ಸಿಂಹ ಫರೀದ್‌ಕೋಟೆಗೆ ನುಗ್ಗಲು ಹವಣಿಸುತ್ತಿದೆಯಂತೆ. ಈಗ ಯಾರ ಅಶಕ್ತತೆ ಬಯಲಿಗೆ ಬರುವುದೋ ಕಾದು ನೋಡೋಣ.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಶಾರೀರಿಕ, ಆರ್ಥಿಕ ಮಾನಸಿಕ, ವ್ಯವಹಾರಿಕ ಸ್ಥಿತಿಗಳು ಉತ್ತಮವಿರುವುದಿಲ್ಲ. ಬಹಳ ಜಾಗರೂಕತೆಯಿಂದ ಈ ವಾರವನ್ನು ಕಳೆಯಿರಿ.

ವೃಷಭ — ಶಾರೀರಿಕ ಸಾಂಪತ್ತಿಕ ಮಾನಸಿಕ, ವ್ಯವಹಾರ ಸ್ಥಿತಿಗಳು ಆಸಂದಾಯಕವಾಗಿರುತ್ತವೆ.

ಮಿಥುನ — ಆರ್ಥಿಕ ಲಾಭ ಹೆಚ್ಚು ಇರುವದಿಲ್ಲ, ಶರೀರ ಸ್ಥಿತಿಯು ಸುಮಾರಾಗಿ ಚನ್ನಾಗಿಯೇ ಇರುತ್ತದೆ. ಖರ್ಚು ನಿಯಂತ್ರಣದಲ್ಲಿರುವುದು.

ಕರ್ಕ — ಮಾನಸಿಕ ಚಿಂತೆ ಹೆಚ್ಚು ಆರೋಗ್ಯವೂ ಚನ್ನಾಗಿರುವದಿಲ್ಲ. ಆರ್ಥಿಕ ವ್ಯವಹಾರಿಕ ಸ್ಥಿತಿಗಳೂ ಸಂತೋಷ ಜನಕಗಳಾಗಿರುವದಿಲ್ಲ.

ಸಿಂಹ — ಕೆಲಸ ಹೆಚ್ಚು ವಿಶ್ರಾಂತಿ ಇರದು ಈ ಕಾರಣದಿಂದ ದೇಹಾಲಸ್ಯ. ವ್ಯವಹಾರದಲ್ಲಿ ಶತ್ರುಗಳ ಭಯವುಂಟು. ಆದಾಯವೇನೂ ಇರುವದಿಲ್ಲ.

ಕನ್ಯಾ — ಕೈಗೊಂಡ ಕಾರ್ಯಗಳಲ್ಲಿ ಜಯಪ್ರಾಪ್ತಿಯುಂಟು ಧನಲಾಭವುಂಟು, ಬಂಧು ಮಿತ್ರ ಆಪ್ತರೊಂದಿಗೆ ಸಲ್ಲಾಪವಾಡುವ ಯೋಗವುಂಟು ಹೊಸಬರು ಸ್ನೇಹಿತರಾಗುವರು.

ತುಲ — ಆರೋಗ್ಯ, ಧನಲಾಭಗಳುಂಟು ವ್ಯವಹಾರದಲ್ಲಿ ಜಯವುಂಟು.

ವೃಶ್ಚಿಕ — ಜನ ಧನಸಹಾಯವು ದೊರೆತು ಕೈಗೊಂಡ ಕಾರ್ಯಗಳು ಫಲಪ್ರದವಾಗುವವು, ಆದರೆ ಆರೋಗ್ಯವು ಚನ್ನಾಗಿರುವದಿಲ್ಲ. ವ್ಯವಹಾರದಲ್ಲಿ ಯಶವು ದೊರೆಯುವದು.

ಧನಸ್ಸು — ಶಾರೀರಿಕ ಸಾಂಪತ್ತಿಕ ವ್ಯವಹಾರಿಕ ಸ್ಥಿತಿಗಳು ಅತೃಪ್ತಿಕರವಾಗಿರುತ್ತದೆ.

ಮಕರ — ಆರೋಗ್ಯವು ಚನ್ನಾಗಿದ್ದರೂ ಮನೋ ಸ್ಥಿತಿಯು ಕೆಟ್ಟಿರುತ್ತದೆ. ದುಡ್ಡಿನ ಮುಗ್ಗಟ್ಟು ಇರುವದಿಲ್ಲ

ಕುಂಭ — ಆರೋಗ್ಯವು ಚನ್ನಾಗಿರುತ್ತದೆ. ಮನಸ್ಸು ಆಹ್ಲಾದಕರವಾಗಿರುತ್ತದೆ. ವ್ಯವಹಾರದಲ್ಲಿ ಜಯ ಮತ್ತು ಯಶಸ್ಸುಗಳು ಪ್ರಾಪ್ತವಾಗುತ್ತದೆ.

ಮೀನ — ಆರ್ಥಿಕ, ಶಾರೀರಿಕ ಸ್ಥಿತಿಗಳು ಉತ್ತಮವಾಗಿರುತ್ತದೆಯಾಗಲಿ ವಿರಾಮವಿಲ್ಲದೆ ದುಡಿಯ ಬೇಕಾಗುತ್ತದೆ. ವ್ಯವಹಾರದಲ್ಲಿ ಸುಖ.

ಅಥೆನ್ಸ್ ಮೇ 20— ಸ್ಥಳೀಯ ಕೈಗಾರಿಕೆಯ ರಕ್ಷಣಾರ್ಥವಾಗಿ ಗ್ರೀಸಿನಲ್ಲಿ ಹೊರದೇಶದ ಹತ್ತಿ ಆಮದು ಸ್ಥಗಿತಗೊಳಿಸಲಾಗಿದೆ.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

॥ ವಂದೇಮಾತರಂ ॥
ಶ್ರೇಷ್ಠವಾದ
ರಾಜಪುರಿ ಹೊಗೇಸೊಪ್ಪಿನಿಂದ
— ತಯಾರಿಸಲ್ಪಟ್ಟ —
ಕಾಂಗ್ರೆಸ್
(ರಿಜಿಸ್ಟರ್ಡ್)
ಮಂಗಳೂರು
ಬೀಡಿಗಳು
ಜೆ. ಎಸ್. ಟೊಬ್ಯಾಕೊ ವರ್ಕ್ಸ್
ಬಸ್ ಟರ್ಮಿನಸ್ ಮೈಸೂರು

At Ranjit
From 24-5-46
DIL KI BAAT
ಈಶ್ವರಲಾಲ್ — ದುರ್ಗಾಕೋಟೆ
ಪಾತ್ರವಹಿಸಿರುವ
ದಿಲ್ ಕಿ ಬಾತ್

ಅಕ್ಕರ
ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

Edited, Printed and published by M. S. Krishna Rao, at the Satvavaip Press, Chamaraja Agrahar, Mysore

ತೆಂಗಲೆ — ವಡಗಲೆ

ಶ್ರೀ ತಿರುಮಲೆ ತಿರುಪತಿ ದೇವಸ್ಥಾನದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ದೊಡ್ಡ ಜೀಯರ್ ರವರಿಗೆ ತೆಂಗಲೆ ಮಂತ್ರ ವಿಧಾನಗಳಿಂದಲೇ ಆರಾಧನೆಯನ್ನು ಮಾಡಲು ಹಕ್ಕು ಇದೆ. ನವಡಗಲೆ ಮಂತ್ರಗಳು ಅಲ್ಲಿ ಕೆಲಸಕ್ಕೆ ಬಾರವು. ಆದರೆ ವಡಗಲೆ ಶಾಖೆಯವರೂ, ತೆಂಗಲೆ ಪೂಜಾ ವಿಧಾನಕ್ಕೆ ಭಂಗವಿಲ್ಲದೆ ಆರಾಧನೆಯಲ್ಲಿ ಭಾಗವಹಿಸಬಹುದು— ಹೀಗೆಂದು ಪ್ರಿವೀಕೌನ್ಸಿಲ್ಲಿನಲ್ಲಿ ಸವರು ತೀರ್ಪು ಕೊಟ್ಟಿರುವರು.

ಮದರಾಸಿನ ಹೊಸ ಗೌರ್ನರರಿಗೂ

ಒಬ್ಬ ಹತ್ತು ವರ್ಷದ ಹುಡುಗನಿಗೂ ಬಳ್ಳಾರಿಯಲ್ಲಿ ನಡೆದ ಸಂಭಾಷಣೆ

ಹುಡುಗ— ರೇಷನ್ನಿನ್ನನ್ನು ಹಳೆಯ ಪ್ರಮಾಣವಾದ 16 ಔನ್ಸುಗಳಿಗೆ ಬದಲಾಯಿಸಿ.

ಗೌರ್ನರು— ನಿನಗೆ ಅಷ್ಟು ಬೇಕೇ ?

ಹುಡುಗ— ನಾನು ಮೂರು ಹೊತ್ತು ತಿನ್ನಬೇಡವೇ ? ಬಡವ, ಮತ್ತು ಏನೊಂದೂ ಕೊಂಡು ತಿನ್ನಲಾರೆ.

ಗೌರ್ನರು— ನಾನು ಹೇಗೆ ತಂದು ಕೊಡಲಿ ?

ಹುಡುಗ— (ಆಲೋಚನೆ ಮಾಡದೆ) ಹೇಗೋ ತಂದು ಬಗೆಯಲ್ಲಿ ತಂದು ಕೊಡಬೇಕು ಸಾರ್, ನೀವು !

Get Medical Diplomas
At home : — Ayurvedic Homeopathic, Unani, etc. Prospectus Free.
Old Indian Medical College
Kotgarh, Simla



At Opera
....ನೇ ವಾರ
ಹೊನ್ನಪ್ಪ ಭಾಗವತರ್
ಟಿ. ಆರ್. ರಾಜಕುಮಾರಿ
ವಸಂತ ಕೋಕಿಲಂ, ಬಾಲಯ್ಯ
ಕಾಳಿ ಎಂ ರತ್ನಂ ಪಾತ್ರವಹಿಸಿರುವ
ವಾಲ್ಮೀಕಿ